ಗೃಹಗಳ ಸ್ಥಿತಿ ಇದೇ ದುಸ್ಥಿತಿಯಲ್ಲಿದೆ ಎಂದು ಹೇಳಬಯಸುತ್ತೇನೆ.

ಶ್ರೀ ಸಿ.ಎಂ.ಉದಾಸಿ:- ಕಟ್ಟಡಗಳ ದುರಸ್ತಿ ಸಲುವಾಗಿ ಆ ಕಟ್ಟಡಗಳು ನಿರ್ಮಾಣವಾದ ದಿನಗಳನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ. ಏಜ್ ಆಫ್ ಬಿಲ್ಡಿಂಗ್ ಪ್ರಶ್ನೆ ಇಲ್ಲಿ ಬರುತ್ತದೆ. ಸುಮಾರು 60 ಕೋಟಿಯಷ್ಟು ಹಣ ಈ ಕಟ್ಟಡಗಳ ರಿಪೇರಿಗೆ ಬೇಕಾಗಿದ್ದರೆ ಶೇಕಡ 30ರಷ್ಟು ಹಣ ಅನುದಾನ ನಮಗೆ ಲಭ್ಯವಾಗುತ್ತಿದೆ. ಎಲ್ಲಾ ಕಟ್ಟಡಗಳನ್ನು ಏಕ ಕಾಲದಲ್ಲಿ ದುರಸ್ತಿ ಮಾಡುವುದಕ್ಕೆ ಸಾಧ್ಯವೆಂದು ನಾನು ಭಾವಿಸಿಕೊಳ್ಳುವುದಿಲ್ಲ. ಆದರೆ ಅನಾಹುತಗಳನ್ನು ತಪ್ಪಿಸಿಕೊಳ್ಳಬೇಕೆನ್ನುವ ಅರ್ಥದಲ್ಲಿ ಅವರ ಕಳಕಳಿ ಏನು ಇದೆ ಅದನ್ನೂ ಅರ್ಥ ಮಾಡಿಕೊಂಡಿದ್ದೇನೆ. ಬಿದ್ದು ಹೋಗಬಹುದು ಅನಾಹುತವಾಗಬಹುದೆನ್ನುವ ಮಾತುಗಳನ್ನು ಏನು ಹೇಳುತ್ತಾರೆ. ಅದಕ್ಕೆ ಆದ್ಯತೆ ಮೇಲೆ ಕೆಲಸ ಮಾಡುವುದು ನ್ಯಾಯ ಸಮ್ಮತವೆಂದು ನಾನು ಭಾವಿಸಿಕೊಂಡಿದ್ದೇನೆ. ಅಂತಹವನ್ನು ಗಮನದಲ್ಲಿಟ್ಟುಕೊಂಡು ತಾವುಗಳೇನು ಸಲಹೆಗಳನ್ನು ಕೊಟ್ಟಿದ್ದೀರಿ. ಆ ಸಲಹೆಗಳನ್ನು ಪೂರೆಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ:- ವಿಟ್ಲ ಪೇಟೆಗೆ ಬೈಪಾಸ್ ರಸ್ತೆ ರಚನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 175 (329)

ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಟ್ಲ ಪೇಟೆಗೆ ಒಂದು ಬೈಪಾಸು ರಸ್ತೆ ರಚಿಸುವ ಬಗ್ಗೆ ಸಾರ್ವಜನಿಕರಿಂದ ಒತ್ತಡವಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಸರಕಾರದ ಗಮನಕ್ಕೆ ಬಂದಿದೆ.

ಆ) ಸದರಿ ಬೈಪಾಸ್ ನಿರ್ಮಾಣಕ್ಕೆ ಭೂಸ್ವಾಧೀನವನ್ನು ಪರಿಗಣಿಸಿ ಸುಮಾರು 120.00 ಲಕ್ಷ ರೂ.ಗಳ ಅಂದಾಜು ಆಗುತ್ತದೆ. ಸಂಚಾರದಟ್ಟಣೆಯು ಸುಮಾರು 1510 ಪಿ.ಸಿ.ಯು, ಇದ್ದು, ಬೈಪಾಸ್ ನಿರ್ಮಾಣ ಮಾಡಬೇಕಾದ ಆದ್ಯತೆ ಇರುವುದಿಲ್ಲವಾದ್ದರಿಂದ, ಸದ್ಯದಲ್ಲಿ ಇಷ್ಟು ಮೊತ್ತರ ಕಾಮಗಾರಿಯನ್ನು ತೆಗೆದುಕೊಳ್ಳುವ ಸಾಧ್ಯತೆ ಇರುವುದಿಲ್ಲ.

ಶ್ರೀ ಎ.ರುಕ್ಮಯ್ಯ ಪೂಜಾರಿ:- ವಿಟ್ಲ ಪೇಟೆ ಕರ್ನಾಟಕ ಮತ್ತು ಕೇರಳ ಗಡಿ ಪ್ರದೇಶದಲ್ಲಿದೆ. ಅಲ್ಲಿ ಪ್ರತಿ ವರ್ಷ ಜನಸಂಖ್ಯೆ, ವಾಹನ ಸಂಖ್ಯೆ ಬೆಳೆಯುತ್ತಿದೆ. ಅಲ್ಲಿ 4 ಮುಖ್ಯ ರಸ್ತೆ ಕೂಡುತ್ತದೆ. ಒಂದು ತುಮಕೂರಿನಿಂದ, ಒಂದು ಮಂಗಳೂರಿನಿಂದ ಇನ್ನು

ಎರಡು ಕೇರಳ ಪ್ರದೇಶದಿಂದ ಕೂಡುತ್ತದೆ. ಇದರಿಂದಾಗಿ ಅಲ್ಲಿ ವಾಹನ ಸಂಚಾರ ಹೆಚ್ಚಾಗಿ ಜನಸಂಚಾರ ಮಾಡಲು ಸಾಧ್ಯವಾಗುವುದಿಲ್ಲ. ರಸ್ತೆ ನೇರ ಇದೆ. ಅಲ್ಲಿ ಬೈಪಾಸ್ ಮಾಡುವ ಬಗ್ಗೆ ಸರಕಾರದ ಗಮನದಲ್ಲಿ ಇದೆ ಎಂದು ಹೇಳಿದ್ದಾರೆ. ಅದಕ್ಕೆ ವ್ಯವಸ್ಥೆ ಕೂಡ ಮಾಡಿದ್ದಾರೆ. ಭೂಸ್ವಾಧೀನತೆ ಅಂದಾಜು ವೆಚ್ಚ ಸುಮಾರು 120 ರೂ.ಗಳೆಂದು ತಯಾರು ಮಾಡಿ ಇಲ್ಲಿ ಹೇಳಿದ್ದಾರೆ. ಅವಶ್ಯಕತೆ ನಿಮ್ಮ ಗಮನಕ್ಕೆ ಬಂದಿದೆ. ಅಲ್ಲಿ ಮತ್ತೆ ನೀವು ಅದು ಬೈಪಾಸ್ ನಿರ್ಮಾಣ ಮಾಡಬೇಕಾದ ಆದ್ಯತೆ ಇರುವುದಿಲ್ಲವಾದ್ದರಿಂದ ಸಧ್ಯದಲ್ಲಿ ಇಷ್ಟು ಮೊತ್ತದ ಕಾಮಗಾರಿಯನ್ನು ತೆಗೆದುಕೊಳ್ಳುವ ಸಾಧ್ಯತೆ. ಇರುವುದಿಲ್ಲವೆಂದು ತಾವು ಉತ್ತರದಲ್ಲಿ ತಿಳಿಸಿದ್ದೀರಿ. ಈಗ ಅದು ಅಲ್ಲಿ ಅವಶ್ಯಕತೆ ಉಂಟು ಅಗತ್ಯ ಉಂಟು ಎಂದು ಕಂಡಾಗ ಪ್ರತಿ ವರ್ಷ ಇಂತಿಷ್ಟು ಹಣ ಕೊಟ್ಟು ಆದಷ್ಟು ಬೇಗನೆ ಮಾಡಿದರೆ ಅನುಕೂಲವಾಗುತ್ತದೆ. ಅಲ್ಲಿ ವಾಹನ ಸಂಚಾರ ಹೆಚ್ಚಿಸುತ್ತಿರುವುದರಿಂದ ಸಂಚಾರ ಮಾಡಲಾಗುವುದಿಲ್ಲ. ಅಷ್ಟು ದಟ್ಟಣೆಯಿಂದ ಕೂಡಿದೆ.

ಶ್ರೀ ಸಿ.ಎಂ.ಉದಾಸಿ:- ಮಾನ್ಯ ಅಧ್ಯಕ್ಷರೇ, ಈ ವಿಟ್ಲ ಬೈಪಾಸ್ ರಸ್ತೆ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಬೈಪಾಸ್ ರಸ್ತೆಗಳಲ್ಲಿ ಯಾವುದಕ್ಕೆ ಆದ್ಯತೆ ಕೊಡಬೇಕೆನ್ನುವುದಕ್ಕೆ ಒಂದು ಸಾಮಾನ್ಯವಾದ ನಿಯಮ ಇದೆ. ಆ ನಿಯಮಗಳನ್ನು ಗಮನದಲ್ಲಿಟ್ಟುಕೊಳ್ಳದೇ ಹೋದರೆ ಎಲ್ಲಾ ಕಡೆಗೂ ಇಂತಹ ಬೇಡಿಕೆಗಳು ಬಂದಾಗ ಏಕ ಕಾಲಕ್ಕೆ ಇದನ್ನು ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿ 1510 ಪ್ಯಾಸೆಂಜರ್ ಕಾರ್ ಯೂನಿಟ್ಸ್ ಮಾತ್ರ ಇದೆ. ಇದರ ಬಗ್ಗೆ ಇವತ್ತು ಸರ್ವೆ ಮಾಡಿದ್ದೇವೆ. ಅಲ್ಲಿ ಹೋಗುವಂತಹ ವಾಹನಗಳ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡರೆ ಈಗಿರುವಂತಹ ನಾರ್ಮ್ಸ್ ಪ್ರಕಾರ ಸಾಧ್ಯವಾಗುವುದಿಲ್ಲ. ಸುಮಾರು 20 ಸಾವಿರವಾದರೂ ಪ್ಯಾಸೆಂಜರ್ ಕಾರುಗಳು ಇರಬೇಕೆಂದು ನಿಯಮ ಇದೆ. ಆದರೂ ಇವತ್ತು ಅವರು ಕೇಳುತ್ತಿರುವ ಬೇಡಿಕೆಯ ಬಗ್ಗೆ ಅಂದಾಜನ್ನು ಮಾಡಿ ಹಣ ಲಭ್ಯತೆ ಮೇಲೆ ಇದನ್ನು ಹಾಕಿಕೊಳ್ಳಬೇಕೆಂದು ತಿಳಿಸಿದ್ದಾರೆ. ವಾಹನ ಸಂಚಾರ, ಜನಸಾಂದ್ರತೆಯನ್ನು ಗಮನದಲ್ಲಿಟ್ಟುಕೊಂಡು ಅದನ್ನು ಪ್ರಥಮ ಆದ್ಯತೆಯಲ್ಲಿ ಇಟ್ಟುಕೊಂಡಿರುತ್ತೇವೆ. ಅದನ್ನೂ ಸಹ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎ.ರುಕ್ಕಯ್ಯ ಪೂಜಾರಿ:- 1510 ಪಿ.ಪಿ.ಯು. ಎಂದು ಹೇಳಿದ್ದಾರೆ. ನೀವು ಅಲ್ಲಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಬೆಳಗ್ಗಿನಿಂದ ಸಂಜೆಯವರೆಗೆ ಅಲ್ಲಿ ವಾಹನಗಳ ಸಂಚಾರದಿಂದಾಗಿ ಜನ ಸಂಚಾರ ಮಾಡಲಿಕ್ಕೇ ಸಾಧ್ಯವಿಲ್ಲ. ಕಾರಣ ರಸ್ತೆ ನೇರ ಇದೆ. ನೇರ ಇದ್ದ ಕಾರಣ ತೊಂದರೆಯಾಗುತ್ತಿದೆ. ಒಂದು ಎರಡು ವರ್ಷದ ನಂತರ ಬಹಳ ಕಷ್ಟವಾಗುತ್ತದೆ. ಈಗಲೇ ಇದಕ್ಕೆ ಕಾರ್ಯಕ್ರಮ ಹಾಕಿಕೊಂಡರೆ ಅನುಕೂಲವಾಗುತ್ತದೆ.

ಅಧ್ಯಕ್ಷರು:- ಆದ್ಯತೆ ಮೇಲೆ ಪ್ರಥಮ ಪ್ರಾಶಸ್ತ್ಯ ಕೊಡುತ್ತೇವೆ ಎಂದು ಮಾತು ಕೊಟ್ಟಿದ್ದಾರೆ.